# ವಾಸ್ತು

ನಕಾಶೆ ಬರೆದು ಯೋಜನೆ ಹಾಕಿ ಕಟ್ಟಲಿಲ್ಲ
ಮುಹೂರ್ತವಿಟ್ಟು ಬಾಗಿಲು ಕೆತ್ತಲಿಲ್ಲ
ಮಂತ್ರ ಘೋಷ ಗೋ ಪ್ರವೇಶ
ಹೂ ಹಾರ ತಳಿರು ತೋರಣ
ಯಾವುದೂ ಇಲ್ಲ

ನೆತ್ತಿ ಮೇಲೆ ಆಸ್ತಿ ಹೊತ್ತು
ಊರೂರು ಅಲೆವ ಹಕ್ಕಿಪಿಕ್ಕಿಗಳು
ನಮ್ಮೂರ ಬೆಟ್ಟದ ಇಳಿಜಾರಿನಲಿ
ಒಂದಿನ ಉದಯಿಸುವರು
ಮದುವೆ, ಆಟದ ಬ್ಯಾನರೇ ಸೂರು
'ಮತ್ತೆ ಹುಟ್ಟಿ ಬಾ'ರೆಂಬ
ಮಸಣದ ಭರವಸೆಯೇ ಬಾಗಿಲು
ಸುತ್ತೆಲ್ಲ ಆಡ್ಯಾವೆ ನಾಯಿ, ನವುಲು, ಗುಬ್ಬಿ, ಹಾವು!

ನಾಗರಿನ ಹಬ್ಬ ಬಂದದ್ದೇ
ಹೊರಡುವರು ಊರೂರಿಗೆ
ಒಲೆ ಕಲ್ಲು ಅತ್ತಿತ್ತ ಸರಿಸಿದರಾಯಿತು
ಹುಗಿದ ನಾಕು ಗುಟ್ಟ ಎಳೆದು
ಹಳೆಸೀರೆಯ ಗಂಟು ನೆತ್ತಿಗೇರಿಸಿದರಾಯ್ತು

ರಾಹು ಗುಳಿಕ ಯಮಗಂಡ ಗ್ರಹಚಾರವೆಲ್ಲ
ಉಂಡ ಮೈ ಬೆಳೆಸಿದವರ ಹಳವಂಡಗಳು
ಹಗಲ ದುಡಿಮೆಯೇ ಇರುಳ ಅನ್ನವಾದವರಿಗೆ
ವಾಸ್ತು, ವಿಧಿ, ಗ್ರಹಗತಿ ಅಪರಿಚಿತ ಪದಗಳು

'ಆದ್ರೂ ಸದಾ ಕಾಲಿಗೆ ಚಕ್ರ
ಕಾಯ್ಲೆ ಮಕ್ಳು ಸಂಸಾರ ಕಷ್ಟ ಅಲ್ಲನೆ?'
ಚೌಡಮ್ಮನ ಕೇಳಿದೆ.
'ಇದ್ದಲ್ಲೇ ಇರಾರು ಯಾರದಾರೆ ಕಣಮ್ಮ?
ಅಂಗಿರದೂ ಬೋ ಬ್ಯಾಸ್ರ.
ಸ್ವರ್ಗದಾಗೊಂದು ಬಾರೀ ಮರ ಐತಂತೆ
ನಮ್ಮೆಸ್ರುನ ಎಲೆಗುಳು ಅದ್ರಾಗೈದಾವೆ
ನಮ್ಮೆಸ್ರ ಎಲೆ ಅಲ್ಲಿ ಬಿದ್ದುಂದೇ ಇಲ್ಲೀದ್ ಮುಗಿತು



ನೆತ್ತಿ ಮ್ಯಾಲಿಂದು ನ್ಯಾಲೆ ಮ್ಯಾಲಿಂದು
ಎಲ್ಲಾ ಅಲ್ಲಲ್ಲೆ ಒಗದು ಹ್ವಂಟೋಯ್ತು ಇರದು...
ಅಲ್ಲೀಗಂಟ ಇಂಗೇ ಓಯ್ತಾ ಇರದು. ಅಷ್ಟೆಯ'

ಬಿಟ್ಟ ಕಣ್ಣು ಬಿಟ್ಟು ನೋಡುತ
ನಾ ಕಲ್ಲಾದ ಹೊತ್ತು
'ಹಳೇ ಕೂದ್ಲಾ ಬಟ್ಟೆ ಪ್ಲಾಸ್ಟಿಕ್ ಕಬಣಾ'ಗಳ
ಲೋಕ ಹಿತದಲ್ಲಿ ಚೌಡಿ ಕರಗಿ ಹೋದಳು.